ಜನಮಿತ್ರ

ರಾಜೀವ್ ಕಾಲೇಜಿನಲ್ಲಿ ರಕ್ತದಾನ ಶಿಬಿರ



ಹಾಸನ: ನಗರದ ರಾಜೀವ್ ತಾಂತ್ರಿಕ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನ ಘಟಕ ಹಾಗು ಯುವ ರೆಡ್ ಕ್ರಾಸ್ ಘಟಕದ ವತಿಯಿಂದ ಜೀವರಕ್ಷ ರಕ್ತ ನಿಧಿಯವರ ಸಹಯೋಗದೊಂದಿಗೆ ದಿ. ಡಾ. ವಿ. ರಾಜೀವ್ ಅವರ ಜನ್ಮದಿನಾಚರಣೆ ಅಂಗವಾಗಿ ಕಾಲೇಜಿನಲ್ಲಿ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿತ್ತು.

ಶಿಬಿರದಲ್ಲಿ ರಾಜೀವ್ ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿಗಳು, ಬೋಧಕ ಹಾಗು ಬೋಧಕೇತರ ಸಿಬ್ಬಂದಿ ಸೇರಿದಂತೆ ಸುಮಾರು 65ಕ್ಕೂ ಅಧಿಕ ಮಂದಿ ರಕ್ತದಾನ ಮಾಡುವ ಮೂಲಕ ದಿ. ಡಾ. ವಿ. ರಾಜೀವ್ ಅವರ ಜನ್ಮ ದಿನಾಚರಣೆಯನ್ನು ಅರ್ಥಪೂರ್ಣವಾಗಿಸಿದರು.

ಈ ಶಿಬಿರದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ. ಮಹೇಶ್ ಪಿ.ಕೆ., ರಾಜೀವ್ ತಾಂತ್ರಿಕ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾ ಘಟಕ ಹಾಗು ಯುವ ರೆಡ್ ಕ್ರಾಸ್ ಘಟಕದ ಕಾರ್ಯಕ್ರಮಾಧಿಕಾರಿ ಡಾ. ಹೆಚ್.ಎನ್. ತಮ್ಮಣ್ಣ, ಎಲ್ಲಾ ವಿಭಾಗದ ಮುಖ್ಯಸ್ಥರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

Hassan Edition
May 24, 2025 Page No. 8
Powered by: erelego.com

ಡಾ.ವಿ.ರಾಜೀವ್ ಜನ್ಮದಿನ: ರಕ್ತದಾನ ಶಿಬಿರ



ಹಾಸನದ ರಾಜೀವ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ರಾಜೀವ್ ಸಂಸ್ಥೆ ಸಂಸ್ಥಾಪಕ ದಿ. ಡಾ. ವಿ.ರಾಜೀವ್ ಜನ್ಮದಿನಾಚರಣೆ ಅಂಗವಾಗಿ ರಕ್ತದಾನ ಶಿಬಿರ ನಡೆಸಲಾಯಿತು.

■ **ವಿಕ ಸುದ್ದಿಲೋಕ** ಹಾಸನ

ಹಾಸನ ನಗರದ ರಾಜೀವ್ ತಾಂತ್ರಿಕ ಮಹಾವಿದ್ಯಾಲಯದ ಕಾಲೇಜಿನ ಆವರಣದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕ ಹಾಗೂ ಯುವ ರೆಡ್‌ಕ್ರಾಸ್ ಘಟಕದ ಮತಿಯಿಂದ ಜೀವರಕ್ಷ ರಕ್ತ ನಿಧಿಯವರ ಸಹಯೋಗದೊಂದಿಗೆ ರಾಜೀವ್ ಸಂಸ್ಥೆ ಸಂಸ್ಥಾಪಕ ದಿ. ಡಾ. ವಿ.ರಾಜೀವ್ ಅವರ ಜನ್ಮದಿನಾಚರಣೆ ಅಂಗವಾಗಿ ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು.

ಶಿಬಿರದಲ್ಲಿ ರಾಜೀವ್ ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿ ವೃಂದ, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗ ಸೇರಿದಂತೆ 65ಕ್ಕೂ ಅಧಿಕ ಮಂದಿ ರಕ್ತದಾನ ಮಾಡಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಪಿ.ಕೆ. ಮಹೇಶ್, ರಾಜೀವ್‌ತಾಂತ್ರಿಕ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನ ಘಟಕ ಹಾಗು ಯುವ ರೆಡ್ ಕ್ರಾಸ್ ಘಟಕದ ಕಾರ್ಯಕ್ರಮಾಧಿಕಾರಿ ಡಾ. ಎಚ್.ಎನ್.ತಮ್ಮಣ್ಣ ಎಲ್ಲಾ ವಿಭಾಗದ ಮುಖ್ಯಸ್ಥರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

ಆದಿಚುಂಚನಗಿರಿ ವಿವಿಯಲ್ಲಿ ರಾಜ್ಯಮಟ್ಟದ ವಾಲಿಬಾಲ್ ಪಂದ್ಯ

ರಾಜೀವ್ ತಾಂತ್ರಿಕ ಮಹಾವಿದ್ಯಾಲಯ ಪ್ರಥಮ

■ ವಿಕ ಸುದ್ದಿಲೋಕ ಹಾಸನ

ರಾಜೀವ್‌ತಾಂತ್ರಿಕ ಮಹಾವಿದ್ಯಾಲಯವು(RIT) ಕ್ರೀಡೆಯಲ್ಲಿ ಉತ್ತಮ ಸಾಧನೆ ಮಾಡಿದೆ. ಕಾಲೇಜಿನ ಪುರುಷರು ಹಾಗೂ ಮಹಿಳಾ ವಾಲಿಬಾಲ್ ತಂಡಗಳು ಇತ್ತೀಚಿನ ವಿಭಾಗ ಮತ್ತು ರಾಜ್ಯ ಮಟ್ಟದ ಪಂದ್ಯಾವಳಿಗಳಲ್ಲಿ ಶ್ರೇಷ್ಠ ಪ್ರದರ್ಶನದ ಮೂಲಕ ಗಮನ ಸೆಳೆದಿವೆ.

ಇತ್ತೀಚೆಗಷ್ಟೇ ಆದಿಚುಂಚನಗಿರಿ ವಿವಿ ಬಿಜಿಎಸ್‌ಐಟಿ(BGSIT) ವತಿಯಿಂದ ಹಮ್ಮಿಕೊಳ್ಳಲಾಗಿದ್ದ ರಾಜ್ಯಮಟ್ಟದ ವಾಲಿಬಾಲ್ ಪಂದ್ಯಾವಳಿಯಲ್ಲಿ ಮಹಿಳಾ ವಾಲಿಬಾಲ್ ತಂಡವು ತನ್ನ ಶ್ರೇಷ್ಠ ಆಟದ ಮೂಲಕ ಪ್ರಥಮ ಸ್ಥಾನವನ್ನು ಪಡೆದು ಚಾಂಪಿಯನ್ ಪಟ್ಟ ಅಲಂಕರಿಸಿತು. ಪಂದ್ಯಾವಳಿಯಲ್ಲಿ ತಂಡದ ನಾಯಕಿ ಎಂ.ಕೀರ್ತನಾ ಅತ್ಯುತ್ತಮ ಪ್ರದರ್ಶನ ನೀಡಿ ಪಂದ್ಯಾವಳಿಯ ಶ್ರೇಷ್ಠ ಆಟಗಾರ್ತಿ ಎಂಬ ಗೌರವಕ್ಕೆ ಪಾತ್ರರಾದರು.

ಇದರೊಂದಿಗೆ ಶಿವಮೊಗ್ಗದ ಜೆಎನ್‌ಎನ್‌ಸಿಇ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದ್ದ ವಿಶ್ವೇಶ್ವರಯ್ಯ ತಾಂತ್ರಿಕ ವಿವಿ(VTU)ಸೆಂಟ್ರಲ್ ಕರ್ನಾಟಕ ವಿಭಾಗಮಟ್ಟದ ಮಹಿಳೆಯರ ವಾಲಿಬಾಲ್ ಪಂದ್ಯಾವಳಿಯಲ್ಲಿಯೂ(RIT) ಮಹಿಳಾ ತಂಡವು ಅತ್ಯುತ್ತಮ ಆಟವಾಡಿ ಚಾಂಪಿಯನ್ ಆಗಿದೆ. ಇಲ್ಲಿ ಜಯ ಗಳಿಸಿದ ಫಲವಾಗಿ ಹುಬ್ಬಳ್ಳಿಯ ಜೈನ್ ಕಾಲೇಜ್ ಆಫ್ ಎಂಜಿನಿಯರಿಂಗ್ ಅ್ಯಂಡ್ ಟೆಕ್ನಾಲಜಿಯಲ್ಲಿ ನಡೆದ ರಾಜ್ಯಮಟ್ಟದ ಮಹಿಳೆಯರ ವಾಲಿಬಾಲ್ ಪಂದ್ಯಾವಳಿಗೆ ಆಯ್ಕೆಯಾಗಿ ಅಲ್ಲಿ ದ್ವಿತೀಯ ಸ್ಥಾನ ಪಡೆಯಿತು.

ಈ ಸಾಧನೆ ಮಾಡಿದ ವಿದ್ಯಾರ್ಥಿನಿಯರಿಗೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು, ದೈಹಿಕ ಶಿಕ್ಷಣ ನಿರ್ದೇಶಕ ಉಮೇಶ್ ಬಿ.ಡಿ., ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕ ಗಣೇಶ ಎಚ್.ಎ. ಬೋಧಕ ಹಾಗೂ ಬೋಧಕೇತರರು, ಸಿಬ್ಬಂದಿಗೆ ಅಭಿನಂದನೆ ಸಲ್ಲಿಸಿದ್ದಾರೆ.



ಆದಿಚುಂಚನಗಿರಿ ವಿವಿ ಬಿಜಿಎಸ್‌ಐಟಿ ವತಿಯಿಂದ ನಡೆದ ರಾಜ್ಯಮಟ್ಟದ ವಾಲಿಬಾಲ್ ಪಂದ್ಯಾವಳಿಯಲ್ಲಿ ರಾಜೀವ್ ತಾಂತ್ರಿಕ ಮಹಾವಿದ್ಯಾಲಯ ಪ್ರಥಮ ಸ್ಥಾನ ಪಡೆದು ಸಂಭ್ರಮಿಸಿತು.

ಕ್ರೀಡಾಪಟುಗಳಿಗೆ ಕ್ರೀಡಾ ಸ್ಫೂರ್ತಿ ಅಗತ್ಯ

■ ವಿಕ ಸುದ್ದಿಲೋಕ ಹಾಸನ

ಪಂದ್ಯಾವಳಿಯಲ್ಲಿ ಭಾಗವಹಿಸಿದಂತಹ ಕ್ರೀಡಾಪಟುಗಳು ಕ್ರೀಡಾ ಸ್ಫೂರ್ತಿ ಮೆರೆಯಬೇಕು ಎಂದು ಐಕ್ಯೂಎಸಿ ನಿರ್ದೇಶಕ ಡಾ.ಎಚ್.ಎಸ್. ಮೋಹನ್ ತಿಳಿಸಿದರು.

ನಗರದ ರಾಜೀವ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸೆಂಟ್ರಲ್ ಕರ್ನಾಟಕ ಜೋನ್ ಅಂತರ ಕಾಲೇಜುಗಳ ಪುರುಷರ ವಾಲಿಬಾಲ್ ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿದರು.

ಈ ಎರಡು ದಿನಗಳಲ್ಲಿ ನಡೆದ ರೋಚಕ ಪಂದ್ಯಾವಳಿಗಳಲ್ಲಿ ಅಂತಿಮವಾಗಿ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯವು ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರೆ ರಾಜೀವ್ ತಾಂತ್ರಿಕ ಮಹಾವಿದ್ಯಾಲಯವು ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು. ಸಮಾರೋಪ ಸಮಾರಂಭದಲ್ಲಿ ವಿಜೇತ ತಂಡಕ್ಕೆ ಪ್ರಶಸ್ತಿ ವಿತರಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲರಾದ ಡಾ. ಮಹೇಶ್ ಪಿ.ಕೆ. ಭಾಗವಹಿಸಿದ ಎಲ್ಲಾ ತಂಡಗಳಿಗೂ ಅಭಿನಂದನೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ದೈಹಿಕ ಶಿಕ್ಷಣ ನಿರ್ದೇಶಕ ಉಮೇಶ್ ಬಿ.ಡಿ., ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀಗಣೇಶ್ ಎಚ್.ಎ., ಹಲವು ಕಾಲೇಜುಗಳ ದೈಹಿಕ ಶಿಕ್ಷಣ ನಿರ್ದೇಶಕರು ಹಾಗೂ ರಾಜೀವ್ ತಾಂತ್ರಿಕ ಮಹಾವಿದ್ಯಾಲಯದ ಎಲ್ಲಾ ಬೋಧಕ, ಬೋಧಕೇತರ ಸಿಬ್ಬಂದಿ ಹಾಜರಿದ್ದರು.

ರಾಜೀವ್ ತಾಂತ್ರಿಕ ಮಹಾವಿದ್ಯಾಲಯ:ಮಹಿಳಾ ವಾಲಿಬಾಲ್ ಟೀಂ ಸಾಧನೆ



ಹಾಸನ: ನಗರದ ಪ್ರತಿಷ್ಠಿತ ರಾಜೀವ್ ತಾಂತ್ರಿಕ ಮಹಾವಿದ್ಯಾಲಯವು (RIT) ಕ್ರೀಡಾ ಸಾಧನೆಗಳಲ್ಲಿ ಒಂದು ಉತ್ತಮ ತಿರುವು ಕಂಡಿದೆ. ಪುರುಷರ ಹಾಗೂ ಮಹಿಳಾ ವಾಲಿಬಾಲ್ ತಂಡಗಳು ಇತ್ತೀಚೆಗೆ ವಿವಿಧ ವಿಭಾಗ, ರಾಜ್ಯ ಮಟ್ಟದ ಪಂದ್ಯಾವಳಿಗಳಲ್ಲಿ ಶ್ರೇಷ್ಠ ಪ್ರದರ್ಶನ ಮೂಲಕ ಗಮನ ಸೆಳೆದಿವೆ.

ಇತ್ತೀಚೆಗಷ್ಟೇ ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಬಿ.ಜಿ.ಎಸ್.ಐ.ಟಿ (BGSIT) ವತಿಯಿಂದ ಹಮ್ಮಿಕೊಳ್ಳಲಾಗಿದ್ದ ರಾಜ್ಯಮಟ್ಟದ ವಾಲಿಬಾಲ್ ಪಂದ್ಯಾವಳಿಯಲ್ಲಿ ಮಹಿಳಾ ವಾಲಿಬಾಲ್ ತಂಡವು ತನ್ನ ಶ್ರೇಷ್ಠ ಆಟದ ಮೂಲಕ ಪ್ರಥಮ ಸ್ಥಾನ ಪಡೆದು ಚಾಂಪಿಯನ್ ಪಟ್ಟ ಅಲಂಕರಿಸಿತು.ಪಂದ್ಯಾವಳಿಯಲ್ಲಿ ತಂಡದ ನಾಯಕಿ ಎಂ.ಕೀರ್ತನ ಅವರು ಅತ್ಯುತ್ತಮ ಪ್ರದರ್ಶನ ನೀಡಿ ಪಂದ್ಯಾವಳಿಯ ಶ್ರೇಷ್ಠ ಆಟಗಾರ್ತಿ ಎಂಬ ಗೌರವಕ್ಕೆ ಪಾತ್ರರಾದರು.

ಇದರ ಜೊತೆಗೆ ಶಿವಮೊಗ್ಗದ ಜೆ.ಎನ್.ಎನ್.ಸಿ.ಇ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದ್ದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (VTU) ಸೆಂಟ್ರಲ್ ಕರ್ನಾಟಕ ವಿಭಾಗ ಮಟ್ಟದ ಮಹಿಳೆಯರ ವಾಲಿಬಾಲ್ ಪಂದ್ಯಾವಳಿಯಲ್ಲಿಯೂ (RIT) ಮಹಿಳಾ ತಂಡವು ಅತ್ಯುತ್ತಮ ಆಟವಾಡಿ ಚಾಂಪಿಯನ್ ಆಗಿದೆ.

ಈ ವಿಜಯದ ಫಲವಾಗಿ ಹುಬ್ಬಳ್ಳಿಯ ಜೈನ್ ಕಾಲೇಜ್ ಆಫ್ ಇಂಜಿನಿಯರಿಂಗ್ ಆಂಡ್ ಟೆಕ್ನಾಲಜಿಯಲ್ಲಿ ನಡೆಯಲಿರುವ ರಾಜ್ಯಮಟ್ಟದ ಮಹಿಳೆಯರ ವಾಲಿಬಾಲ್ ಪಂದ್ಯಕೂಟದಲ್ಲಿ ಭಾಗವಹಿಸಲು ಆಯ್ಕೆಯಾಗಿ, ಅಲ್ಲಿ ದ್ವಿತೀಯ ಸ್ಥಾನ ಪಡೆಯಿತು. ಈ ಸಾಧನೆಗೈದ ವಿದ್ಯಾರ್ಥಿನಿಯರಿಗೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು, ದೈಹಿಕ ಶಿಕ್ಷಣ ನಿರ್ದೇಶಕರಾದ ಉಮೇಶ್ ಬಿ.ಡಿ. ಹಾಗೂ ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕ ಗಣೇಶ ಎಚ್.ಎ.ಅವರು ಹಾಗೂ ಭೋಧಕ-ಭೋಧಕೇತರ ಸಿಬ್ಬಂದಿ ವರ್ಗದವರು ಅಭಿನಂದನೆ ಹೇಳಿದ್ದಾರೆ.

ಪುರುಷರ ಪಂದ್ಯದಲ್ಲಿ ರನ್ನರ್ ಅಪ್

ಹಾಸನ: ನಗರದ ರಾಜೀವ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಏಪ್ರಿಲ್ 22 ಮತ್ತು 23 ರಂದು ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯದ ಸೆಂಟ್ರಲ್ ಕರ್ನಾಟಕ ಝೋನ್ ಅಂತರ ಕಾಲೇಜುಗಳ ಪುರುಷರ ವಾಲಿಬಾಲ್ ಪಂದ್ಯಾವಳಿ ಆಯೋಜಿಸಲಾಗಿತ್ತು. ಅತಿಥಿಗಳಾಗಿ ಆಗಮಿಸಿದ್ದ IQAC ನಿರ್ದೇಶಕ ಡಾ. ಹೆಚ್.ಎಸ್.ಮೋಹನ್ ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿ, ಇಲ್ಲಿ ಭಾಗವಹಿಸಿರುವ ಕ್ರೀಡಾಪಟುಗಳಿಗೆ ಪಂದ್ಯಗಳಲ್ಲಿ ಕ್ರೀಡಾ ಸ್ಫೂರ್ತಿ ಮೆರೆಯುವಂತೆ ಕಿವಿಮಾತು ಹೇಳಿದರು.

ಈ ಎರಡು ದಿನಗಳಲ್ಲಿ ನಡೆದ ರೋಚಕ ಪಂದ್ಯಾವಳಿಗಳಲ್ಲಿ ಅಂತಿಮವಾಗಿ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯವು ಪ್ರಶಸ್ತಿ ಮುಡಿಗೇರಿಸಿಕೊಂಡರೆ, ರಾಜೀವ್ ತಾಂತ್ರಿಕ ಮಹಾವಿದ್ಯಾಲಯ ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು. ಸಮಾರೋಪ ಸಮಾರಂಭದಲ್ಲಿ ವಿಜೇತ ತಂಡಕ್ಕೆ ಪ್ರಶಸ್ತಿ ವಿತರಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲ ಡಾ. ಮಹೇಶ್.ಪಿ.ಕೆ. ಅವರು, ಭಾಗವಹಿಸಿದ ಎಲ್ಲಾ ತಂಡಗಳಿಗೂ ಅಭಿನಂದನೆ ಸಲ್ಲಿಸಿದರು.

ದೈಹಿಕ ಶಿಕ್ಷಣ ನಿರ್ದೇಶಕ ಉಮೇಶ್ ಬಿ.ಡಿ., ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕ ಗಣೇಶ್ ಹೆಚ್.ಎ. ಮತ್ತು ಹಲವು ಕಾಲೇಜುಗಳ ದೈಹಿಕ ಶಿಕ್ಷಣ ನಿರ್ದೇಶಕರು, ಮಹಾವಿದ್ಯಾಲಯದ ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.

ಕರ್ನಾಟಕ ಮಹಿಳಾ ಫ್ರೋಬಾಲ್ ತಂಡಕ್ಕೆ ಆಯ್ಕೆ

ಹಾಸನ: ನಗರದ ರಾಜೀವ್ ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿನಿ ಕು. ನವ್ಯಶ್ರೀ ಬಿ.ಪಿ, ಕರ್ನಾಟಕ ರಾಜ್ಯ ಫ್ರೋಬಾಲ್ ಮಹಿಳಾ ತಂಡಕ್ಕೆ ಆಯ್ಕೆಯಾಗಿದ್ದಾರೆ. ಬೆಂಗಳೂರಿನಲ್ಲಿ ನಡೆದ ತಂಡದ ಆಯ್ಕೆಯಲ್ಲಿ ಭಾಗವಹಿಸಿ ಅತ್ಯುತ್ತಮ ಆಟದ ಪ್ರದರ್ಶನ ನೀಡುವ ಮುಖೇನ ರಾಜ್ಯ ತಂಡದಲ್ಲಿ ತಮ್ಮ ಸ್ಥಾನವನ್ನು ಪಡೆದುಕೊಂಡಿದ್ದಾರೆ.



ಅವರು ಮುಂದೆ ರಾಷ್ಟ್ರೀಯ ಮಹಿಳಾ ಫ್ರೋಬಾಲ್ ಪಂದ್ಯಗಳಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಲಿದ್ದಾರೆ. ರಾಜ್ಯದ ಎಲ್ಲಾ ಜಿಲ್ಲೆಗಳಿಂದ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದ ಆಯ್ಕೆ ಪ್ರಕ್ರಿಯೆಯಲ್ಲಿ ಕು. ನವ್ಯಶ್ರೀ ಬಿ.ಪಿ ಅವರು ರಾಜ್ಯ ತಂಡಕ್ಕೆ ಆಯ್ಕೆಯಾಗುವ ಮುಖೇನ ಹಾಸನ ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಪ್ರಸ್ತುತ ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದ ಎರಡನೇ ವರ್ಷದ ನಾಲ್ಕನೇ ಸೆಮಿಸ್ಟರ್‌ನಲ್ಲಿ ಓದುತ್ತಿರುವ ಕು. ನವ್ಯಶ್ರೀ ಬಿ.ಪಿ ಅವರಿಗೆ ಕಾಲೇಜಿನ ಮುಖ್ಯ ದೈಹಿಕ ನಿರ್ದೇಶಕ ಉಮೇಶ್ ಹಾಗೂ ಸಹ ದೈಹಿಕ ನಿರ್ದೇಶಕ ಗಣೇಶ್ ಮಾರ್ಗದರ್ಶನ ನೀಡಿದ್ದರು. ಕಾಲೇಜಿನ ಆಡಳಿತ ಮಂಡಳಿ ವಿದ್ಯಾರ್ಥಿನಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಇಷ್ಟು ವರ್ಷಗಳ ಕಾಲ ಸರ್ಕಾರಿ ನೌಕರರ ಸಂಘದ ಚುನಾವಣೆ ನಡೆಯುತ್ತದೆ ಎನ್ನುವುದೇ ಮಾಮೂಲಿ ಜನರಿಗೆ ತಿಳಿದಿರಲಿಲ್ಲ. ಆದರೆ, ಇತ್ತೀಚಿನ ಕೆಲ ವರ್ಷಗಳಿಂದೀಚೆಗೆ ಭಾರೀ ಪೈಪೋಟಿಯೊಂದಿಗೆ ನಡೆಯುವ ಈ ಚುನಾವಣೆಈಬಾರಿಯಾವುದೇಸಾರ್ವತ್ರಿಕ ಚುನಾವಣೆಗೂ ಕಮ್ಮಿ ಇಲ್ಲ ಎನ್ನುವಂತೆ ನಡೆದಿದೆ. ಈಗಾಗಲೇನಿರ್ದೇಶಕರಸ್ಥಾನದ ಚುನಾವಣೆ ನಡೆದಿದ್ದು, ಜಿಲ್ಲಾ ಅಧ್ಯಕ್ಷರ ಆಯ್ಕೆ ಬಾಕಿ ಇದೆ. ಅದಕ್ಕಾಗಿ ಭಾರೀ ಹಣಾಹಣಿ ನಡೆಯುತ್ತಿದ್ದು, ಡಿ.4 ರಂದು ಚುನಾವಣೆ ನಡೆಯಲಿದೆ.



ಈಗಾಗಲೇ ನಿರ್ದೇಶಕ ಸ್ಥಾನದ ಚುನಾವಣೆ ನಡೆದಿದ್ದು, ಬಹುತೇಕನಿರ್ದೇಶಕರುಅವಿರೋಧವಾಗಿ ಆಯ್ಕೆಯಾದರೆ ಮತ್ತಷ್ಟು ನಿರ್ದೇಶಕರು ಚುನಾವಣೆ ಮೂಲಕ ಆಯ್ಕೆಯಾಗಿ ಬಂದಿದ್ದಾರೆ. ಸರ್ಕಾರಿ ನೌಕರರು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಮತ್ತು ಇತರೆ ಮುಖಂಡರು ಮತ್ತು ಸಾರ್ವಜನಿಕರು ಭಾಗವಹಿಸಲು ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರು ಕೋರಿದ್ದಾರೆ.

ಪರಿಸರ ಸಂರಕ್ಷಣೆಗೆ ಪ್ರತಿಯೊ
ಮುಂದಾಗಬೇಕು: ದೇವಾನಂ
ಪರಿಸರ, ಸ್ವಚ್ಛತೆಯ ಕುರಿತು ಮಾಹಿತಿ ಫಲಕ ಅ



ಸಕಲೇಶಪುರ ತಾಲೂಕಿನ ಹಾನುಬಾಳು ರೋಟರಿ ಸಂಸ್ಥೆ ವತಿಯಿಂದ ಸಾ
ಸರ ಮತ್ತು ಸ್ವಚ್ಛತೆಯ ಕುರಿತು ಮಾಹಿತಿ ಫಲಕವನ್ನು ಅನಾವರಣಗೊಳಿಸ

• **ಕನ್ನಡಪ್ರಭ ವಾರ್ತೆ** ಸಕಲೇಶಪುರ

ಪರಿಸರವನ್ನು ಉಳಿಸುವ ಹೊಣೆಗಾರಿಕೆ ಪ್ರತಿಯೊಬ್ಬರ ಮೇಲಿದ್ದು, ಪ
ಪರಿಸರವನ್ನು ಸಂರಕ್ಷಿಸಲು ಮುಂದಾಗಬೇಕೆದೆ ಎಂದು ರೋಟರಿಜಿಲ್ಲಾ
ದೇವಾನಂದ್ ಹೇಳಿದರು.

ತಾಲೂಕಿನಹಾನುಬಾಳು ರೋಟರಿ ಸಂಸ್ಥೆವತಿಯಿಂದ ಸಾರ್ವಜನಿಕರ
ಸ್ವಚ್ಛತೆಯ ಕುರಿತು ಮಾಹಿತಿ ಫಲಕವನ್ನು ಹಾನುಬಾಳ್ ಸಮೀಪದ
ಫಾಲ್ ಬಳಿ ಅನಾವರಣಗೊಳಿಸಿದ ನಂತರ ಮಾತನಾಡಿದರು. ತಾ
ಪ್ರವಾಸಿ ಸ್ಥಾನಗಳಿದ್ದು, ಇವುಗಳನ್ನು ವೀಕ್ಷಿಲು ಬರುವ ಪ್ರವಾಸಿಗ
ಕಾಪಾಡುವ ಅವಶ್ಯಕತೆಯಿದೆ. ಈ ನಿಟ್ಟಿನಲ್ಲಿ ಪ್ರವಾಸಿಗರ ಮಾರ್ಗದರ್ಶ
ಸಂಸ್ಥೆ ವತಿಯಿಂದ ಪರಿಸರ ಹಾಗೂ ಸ್ವಚ್ಛತೆ ಕುರಿತು ಮಾಹಿತಿ ಫ
ಅನಾವರಣಗೊಳಿಸಲಾಗಿದೆ. ರೋಟರಿ ಸಂಸ್ಥೆ ಒಂದು ಅಂತಾರಾಷ್ಟ್ರೀಯ
ನಿರಂತರವಾಗಿವಿವಿಧಸೇವಾಚಟುವಟಿಕೆಗಳಲ್ಲಿತೊಡಗಿಸಿಕೊಂಡಿದೆ. ಹಾ
ಚಿಕ್ಕಹೊಬಳಿಯ ಇಲ್ಲಿಯ ರೋಟರಿಕ್ಲಬ್ ಸದಸ್ಯರು ನಿರಂತರವಾಗಿ ಸ
ಚಟುವಟಿಕೆಗಳನ್ನು ಮಾಡುತ್ತಿರುವುದು ಸಂತೋಷದ ವಿಷಯವಾಗಿದೆ.

ಹಾನುಬಾಳ್ ರೋಟರಿ ಸಂಸ್ಥೆಯ ಕಾರ್ಯದರ್ಶಿ ಭೂಷಣ್ ಗಾ
ನಾಡಿ, ಪ್ರವಾಸೋದ್ಯಮಕ್ಕೆ ಹೆಸರುವಾಸಿಯಾಗಿರುವ ಹಾನುಬಾಳ್‌ನಲ್ಲಿ
ವತಿಯಿಂದ ಹಲವು ಕಾರ್ಯಕ್ರಮಗಳನ್ನು ಮಾಡಲಾಗಿದೆ. ಪ್ಲಾಸ್ಟಿಕ್ ಮ
ಮಾಡುವುದು ನಮ್ಮ ಕನಸಾಗಿದ್ದು, ಈ ನಿಟ್ಟಿನಲ್ಲಿ ಸಂಸ್ಥೆ ವತಿಯಿಂದ ಜ
ಲಾಗುವುದು ಹಾಗೂ ಇನ್ನಿತರ ಸೇವಾ ಚಟುವಟಿಕೆಗಳನ್ನು ಸಾರ್ವಜನಿಕ
ಗುತ್ತದೆ ಎಂದರು. ನಂತರ ಸಂಜೆ ಹಾನುಬಾಳು ರೋಟರಿ ಭವನದಲ್ಲಿ ಜಿ
ಭೇಟಿ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಸೇ
ಮೂವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಉಪರಾಜ್ಯಪಾಲ
ವಲಯ ೪ ಲೆಫ್ಟಿನೆಂಟ್ ಯಶವಂತ್, ಹಾನುಬಾಳ್ ಹೋಬಳಿ ರೋ
ಸುಂದರೇಶ್ ಬಿ.ಕೆ, ಪದಾಧಿಕಾರಿಗಳಾದ ನಿಶಾಂತ್, ರವಿ, ವಿಜಿಕುಮಾರ್
ಸಂದೇಶ್ ಕೀರ್ತಿ, ರತ್ನಾಕರ್ ಹಾಗೂ ಇತರೆ ಸಂಸ್ಥೆಯ ಪದಾಧಿಕಾರಿಗಳು

ಪತ್ರಿಕಾಗೋಷ್ಠಿ ರಾಜೀವ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಡಾ. ವಿ. ರಾಜೀವ್ ಅವರ ಕನಸಿನ ಕೂಸು: ಡಾ. ರಚನಾ ರಾಜೀವ್

ರಾಜೀವ್ ಎಂಜಿನಿಯರಿಂಗ್ ಕಾಲೇಜಿಗೆ ನ್ಯಾಕ್ 'ಎ' ಮಾನ್ಯತೆ

• **ಕನ್ನಡಪ್ರಭ ವಾರ್ತೆ** ಹಾಸನ

ನಗರದ ರಾಜೀವ್ ತಾಂತ್ರಿಕ ಮಹಾವಿದ್ಯಾಲಯಕ್ಕೆರಾಷ್ಟ್ರೀಯಮೌಲ್ಯಮಾಪನಮಾನ್ಯತಾ ಮಂಡಳಿ(ನ್ಯಾಕ್)ಯಿಂದ 'ಎ' ಗ್ರೇಡ್ ಮಾನ್ಯತೆ ಬಂದಿದೆ ಎಂದು ರಾಜೀವ್ ಶಿಕ್ಷಣ ಸಂಸ್ಥೆಯಅಧ್ಯಕ್ಷರಾದಡಾ. ರಚನಾರಾಜೀವ್ ಅವರು ತಿಳಿಸಿದರು.



ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರಾಜೀವ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ ರಚನಾ ರಾಜೀವ್.

ಪತ್ರಕರ್ತರ ಭವನದಲ್ಲಿ ಮಂಗಳವಾರ ಮಾತನಾಡಿ, 2024ರ ನವೆಂಬರ್‌ತಿಂಗಳ 14 ಮತ್ತು 15 ರಂದು ನ್ಯಾಕ್ ತಂಡ ಕಾಲೇಜಿಗೆ ಭೇಟಿ ನೀಡಿತ್ತು. ಈ ತಂಡ ಕಾಲೇಜಿನಲ್ಲಿ ಲಭ್ಯವಿರುವ ಸವಲತ್ತುಗಳನ್ನು ಪರಿಶೀಲನೆ ನಡೆಸಿ ಈ ಮುಂದಿನ ಅಂಶಗಳಾದ ಪಠ್ಯಕ್ರಮದ ಅಂಶಗಳು, ಬೋಧನೆ, ಕಲಿಕೆಮತ್ತುಮೌಲ್ಯಮಾಪನ, ಸಂಶೋಧನೆ, ನಾವೀನ್ಯತೆಮತ್ತುವಿಸ್ತರಣೆಗಳು, ಮೂಲಸೌಕರ್ಯ ಮತ್ತು ಕಲಿಕೆ ಸಂಪನ್ಮೂಲಗಳು, ವಿದ್ಯಾರ್ಥಿ ಬೆಂಬಲ ಮತ್ತು ಪ್ರಗತಿ, ಆಡಳಿತ, ನಾಯಕತ್ವ ಮತ್ತು ನಿರ್ವಹಣೆ ಹಾಗೂಸಾಂಸ್ಥಿಕಮೌಲ್ಯಗಳು ಮತ್ತು ಉತ್ತಮ ಅಭ್ಯಾಸಗಳನ್ನು ಪರಿಶೀಲಿಸಿ ಅದರ ಆಧಾರದ ಮೇಲೆ ಈ ತಂಡ ರಾಜೀವ್ ತಾಂತ್ರಿಕ ಮಹಾವಿದ್ಯಾಲಯಕ್ಕೆ ಎ ಗ್ರೇಡ್ ಮಾನ್ಯತೆಯನ್ನು ನೀಡಿದೆ ಎಂದರು.

ಹಾಸನ ಜಿಲ್ಲೆಯ ಪ್ರಸಿದ್ಧ ಮಕ್ಕಳ ತಜ್ಞರಾದ ದಿವಂಗತ. ಡಾ. ವಿ. ರಾಜೀವ್‌ರವರು ವೈದ್ಯಕೀಯ ಕ್ಷೇತ್ರದಲ್ಲಿನ ತಮ್ಮ ಸೇವೆಯ ಜೊತೆಗೆ ಶಿಕ್ಷಣ ಕ್ಷೇತ್ರದಲ್ಲಿ ತಮ್ಮದೇ ಆದ ಕೊಡುಗೆ ನೀಡುವ ಮಹದಾಸೆಯೊಂದಿಗೆ 1998ರಲ್ಲಿ ರಾಜೀವ್ ಎಜುಕೇಶನ್ ಟ್ರಸ್ಟ್ ಸ್ಥಾಪಿಸಿ, ಆದರಡಿಯಲ್ಲಿನರ್ಸಿಂಗ್, ಫ್ಯಾರಾಮೆಡಿಕಲ್, ಬಿ.ಎಡ್. ಡಿ.ಎಡ್. ರಾಜೀವ್ ಪಾಲಿಟೆಕ್ನಿಕ್, ರಾಜೀವ್ ಆಯುರ್ವೇದಮಹಾವಿದ್ಯಾಲಯ ಮುಂತಾದ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಯಶಸ್ವಿಯಾಗಿ ಮುನ್ನಡೆಸಿದರು. ಈ ಮೇಲಿನ ಎಲ್ಲಾ ಸಂಸ್ಥೆಗಳಿಂದ ಪ್ರಸ್ತುತ 11,500 ಕ್ಕೂ ಹೆಚ್ಚುವಿದ್ಯಾರ್ಥಿಗಳುಪದವಿಪಡೆದಿರುತ್ತಾರೆ. ಅವರ ಈ ಕಾರ್ಯಗಳು, ಉನ್ನತ ನಿರ್ಧಾರಗಳು, ಆತ್ಮಸ್ಥೆರ್ಯ ಎಲ್ಲರನ್ನು ಹುಬ್ಬೇರುವಂತೆ ಮಾಡಿತು ಎಂದು ಹೇಳಿದರು.

ರಾಜೀವ್‌ಇನ್‌ಸ್ಟಿಟ್ಯೂಟ್‌ಆಫ್‌ಟೆಕ್ನಾಲಜಿ ಎಂಬುದು ಡಾ. ವಿ. ರಾಜೀವ್ ಅವರ ಕನಸಿನ ಕೂಸು. ಅವರ ಅವಿರತ ಪ್ರಯತ್ನದಿಂದಾಗಿ ಈ ತಾಂತ್ರಿಕಸಂಸ್ಥೆಯು2008ರಲ್ಲಿವಿವಿಧಕೋರ್ಸ್‌ಗಳನ್ನುಆರಂಭಿಸಿಕಾರ್ಯನಿರ್ವಹಿಸುತ್ತಿವೆ. ಇಲ್ಲಿಯವರೆಗೆಈಕಾಲೇಜಿನಿಂದ ಒಟ್ಟು4875 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪದವಿ ಪಡೆದು ದೇಶ ಹಾಗೂ ವಿದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಶೈಕ್ಷಣಿಕ ಮಾರ್ಗದರ್ಶನದ ಜೊತೆಗೆ, ಕಾಲೇಜಿನ ಆವರಣದಲ್ಲಿ ಹಸಿರು ಕ್ಯಾಂಪಸ್, ಪ್ಲೇಸ್‌ಮೆಂಟ್ ಆಯ್ಕೆ ಮತ್ತು ತರಬೇತಿ, ಕ್ರೀಡಾ ಚಟುವಟಿಕೆಗಳ ವ್ಯವಸ್ಥೆಯನ್ನುಕಲ್ಪಿಸಲಾಗಿದೆ. ಇದೇವೇಗದಲ್ಲಿ ಮುನ್ನಡೆಯುತ್ತಿದ್ದ ಸಂಸ್ಥೆಗೆ ಕೋವಿಡ್-19ರ ಹಣಾತ್ ವಿಪತ್ತು ಬಂದಿತು. ಈ ಆಡಚಣೆಯ ನಡುವೆಯೂ ನಮ್ಮ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಉತ್ತಮ ಸಾಧನೆ ಮಾಡಿದರು. ಆದರೆ 2021ರಲ್ಲಿ, ನಮ್ಮ ಪ್ರೀತಿಯ ಸಂಸ್ಥಾಪಕ ಅಧ್ಯಕ್ಷರಾದ ಡಾ. ವಿ. ರಾಜೀವ್ ಅವರ ಹಣಾತ್ ನಿಧನದಿಂದ ಎಲ್ಲಾ ಕನಸುಗಳು ಭಗ್ನಗೊಂಡವು. ಸ್ವಲ್ಪ ಹೊತ್ತು ಎಲ್ಲವೂ ನಿಂತವು. ಆದರೆ ಪ್ರಸ್ತುತ ಕಾರ್ಯದರ್ಶಿಯಾಗಿರುವ ಡಾ. ಬಿ.ಎನ್. ರತ್ನರವರು, ಅಧ್ಯಕ್ಷರಾಗಿರುವ ಡಾ. ರಚನಾ ರಾಜೀವ್ ಮತ್ತು ಉಪಾಧ್ಯಕ್ಷರಾಗಿರುವ ಡಾ. ರಂಜಿತ್ ರಾಜೀವ್‌ರವರು ಪರಿಸ್ಥಿತಿಯನ್ನು ಬುದ್ಧಿವಂತಿಕೆಯಿಂದ ನಿಭಾಯಿಸಿ ಡಾ ವಿ. ರಾಜೀವ್‌ರವರ ಕನಸಿನಂತೆ ಸಂಸ್ಥೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವಲ್ಲಿ ಯಶಸ್ವಿಯಾದರು ಎಂದು ಹೇಳಿದರು.

ನಮ್ಮ ಅಧ್ಯಕ್ಷರ ಮಾರ್ಗದರ್ಶನ ಮತ್ತು ಸಹಕಾರದಿಂದ 2023 ಮತ್ತು 2024 ರ ಕ್ಯಾಲೆಂಡರ್‌ವರ್ಷಗಳು ರಾಜೀವ್ ತಾಂತ್ರಿಕ ಮಹಾವಿದ್ಯಾಲಯದ ಇತಿಹಾಸದಲ್ಲಿ ಅಚ್ಚಳಿಯದೆ ಉಳಿಯುವಂತಹವರ್ಷಗಳಿಂದರೆತಪ್ಪಾಗಲಾರದು. ಈ ಸಮಯದಲ್ಲಿ ಕಾಲೇಜಿನಲ್ಲಿ ಆದಂತಹ ಅಭೂತ ಪೂರ್ವ ಬದಲಾವಣೆಗಳು ಸಂಸ್ಥೆಯನ್ನು ಉನ್ನತ ಮಟ್ಟಕ್ಕೇರಿಸಿದವು. ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದಲ್ಲಿ ಹೊಸಬ್ಯಾಡ್‌ಮಿಂಟನ್‌ಕೋರ್ಟ್, ಆತ್ಯಾಧುನಿಕಜಿಮ್, ಹೊಸಬ್ಯಾಸ್ಕೆಟ್‌ಬಾಲ್‌ಕೋರ್ಟ್ ಮತ್ತು ಹತ್ತು ಹಲವು ಒಳಾಂಗಣ ಕ್ರೀಡೆಗಳನ್ನು ವಿನೂತನರೀತಿಯಲ್ಲಿಪ್ರಾರಂಭಿಸಲಾಯಿತು. ಇತ್ತೀಚಿನ ವಿದ್ಯಮಾನಗಳಿಗೆ ಹೊಂದುವಂತೆ ಉದ್ಯೋಗ ತರಬೇತಿ ಮತ್ತು ಆಯ್ಕೆ ವಿಭಾಗವನ್ನು ಉನ್ನತ ದರ್ಜೆಗೇರಿಸಿದರು. ಗ್ರಂಥಾಲಯಕ್ಕೆ ಹೆಚ್ಚುವರಿ ಪಠ್ಯಪುಸ್ತಕಗಳು ಹಾಗೂ ನಿಯತಕಾಲಿಕೆಗಳು ಸೇರುವಲ್ಲಿ ಬಹಳ ಮುತುವರ್ಜಿವಹಿಸಿದರು ಎಂದು ತಮ್ಮ ಶಿಕ್ಷಣ ಸಂಸ್ಥೆ ಬಗ್ಗೆಮಾಹಿತಿನೀಡಿದರು. ಈಮಾನ್ಯತೆಯನ್ನು ಪಡೆದಿದ್ದಕ್ಕೆಎಲ್ಲಾಡೀನ್‌ಗಳು, ಎಲ್ಲಾವಿಭಾಗದ ಮುಖ್ಯಸ್ಥರುಗಳು, ಬೊಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗದವರಿಗೆ, ವಿದ್ಯಾರ್ಥಿವರ್ಗದವರು ಹಾಗೂ ಪೋಷಕರುಗಳನ್ನು ಅಭಿನಂದಿಸುವುದಾಗಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರಾಜೀವ್ ಶಿಕ್ಷಣ ಸಂಸ್ಥೆಯಕಾರ್ಯದರ್ಶಿಗಳಾದಡಾ.ಬಿ.ಎನ್. ರತ್ನ, ಉಪಾಧ್ಯಕ್ಷರಾದಡಾ.ರಂಜಿತ್‌ರಾಜೀವ್, ಕಾಲೇಜಿನ ಪ್ರಾಂಶುಪಾಲರಾದ ಡಾ. ಪಿ.ಕೆ. ಮಹೇಶ್, ಆಯುರ್ವೇದ ಕಾಲೇಜಿನ ಪ್ರಾಂಶುಪಾಲ ಡಾ. ಎಸ್. ಎ. ನಿತಿನ್, ರಾಮಕುಮಾರ್‌ಸೇರಿದಂತೆ ಇತರರು ಉಪಸ್ಥಿತರಿದ್ದರು.

ಹಾಸನ | ಮೈಸೂರು | ಕೊಡಗು | ಮಂಡ್ಯ | ರಾಮನಗರ Web : www.janamitra.co E-mail : janamitradesk@gmail.com HASSAN Edition

ಸಂಪುಟ : 62 ಸಂಚಿಕೆ : 358 ಪುಟಗಳು : 8 04 ಡಿಸೆಂಬರ್ 2024 ಬುಧವಾರ Volume: 62 * Issue: 358 * Pages : 8 * WEDNESDAY : 04-12-2024 RNI 7564/1962 No.KA/SK/HSN/7

ಪವನ ಪುತ್ರ ಕಲ್ಯಾಣ ಮಂಟಪ
ಪವನ ಪುತ್ರ ರೆಸಾರ್ಟ್, ಮೈಸೂರು ರಸ್ತೆ, ಕೆಐಎಡಿಬಿ ಇಂಡಸ್ಟ್ರೀಯಲ್ ಏರಿಯಾ, ರೋಟರಿ ಭವನ ಹತ್ತಿರ, ಹಾಸನ.



- 1000 ಜನ ಏಕಕಾಲಕ್ಕೆ ಆಸೀನರಾಗಬಲ್ಲ ಸಮಾರಂಭದ ಹಾಲ್
- ಒಂದೇ ಬಾರಿಗೆ 1500 ಜನ ಊಟಕ್ಕೆ ಕೂರಬಹುದಾದ ಊಟದ ಹಾಲ್
- ಎಸಿ ರೂಮ್‌ಗಳು

9916607999, 9886799355

ಜಿ ಎಲ್ ಆಚಾರ್ಯ ಜ್ಯುವೆಲ್ಲರ್ಸ್
ಜಿಎಲ್ ಆಚಾರ್ಯ ಜುವೆಲರ್ಸ್
22 ಕ್ಯಾರೆಟ್ ಚಿನ್ನದ ನಿನ್ನೆಯ ದರ



7090898360
Open on all sundays

ಸಂಹಿತೆ ಯಶಸ್ವಿ ಅನುಷ್ಠಾನ

ಮೂರು ಹೊಸ ಅಪರಾಧ ಕಾನೂನು ರಾಷ್ಟ್ರಕ್ಕೆ ಸಮರ್ಪಿಸಿದ ಪ್ರಧಾನಿ ನರೇಂದ್ರ ಮೋದಿ



ನವದೆಹಲಿ: ದೇಶದ ಅಪರಾಧ ಕಾನೂನು ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆ ತಂದಿರುವ ಮೂರು ಹೊಸ ಅಪರಾಧ ಕಾನೂನುಗಳನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಚಂಡೀಗಢದಲ್ಲಿ ರಾಷ್ಟ್ರಕ್ಕೆ ಸಮರ್ಪಿಸಿದ್ದಾರೆ.

ಈ ಮೂಲಕ ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷಿ ಅಧಿನಿಯಮಗಳು ಯಶಸ್ವಿಯಾಗಿ ಅನುಷ್ಠಾನಗೊಂಡಿವೆ.

ಬಳಿಕ ಮಾತನಾಡಿದ ಪ್ರಧಾನಿ ಮೋದಿ, ಭಾರತ ಸಂವಿಧಾನದ ಸ್ಫೂರ್ತಿಯಿಂದ ಪ್ರೇರಿತವಾದ ಭಾರತೀಯ ನ್ಯಾಯ ಸಂಹಿತೆ ಜಾರಿಗೆ ಬರುತ್ತಿರುವುದು ಒಂದು ಐತಿಹಾಸಿಕ ಕ್ಷಣವಾಗಿದ್ದು, ರಾಷ್ಟ್ರವು ವಿಕಸಿತ ಭಾರತ ಕಟ್ಟುವ ಸಂಕಲ್ಪದೊಂದಿಗೆ ಮುನ್ನಡೆಯುವ ದೇಶಕ್ಕೆ ಸಮರ್ಪಿಸುವ ಮುನ್ನ ಕಾನೂನುಗಳ ಪ್ರಾಯೋಗಿಕ ಬಳಕೆಯನ್ನು ಪ್ರಧಾನಿ ಮತ್ತು ಗೃಹ ಸಚಿವರು ವೀಕ್ಷಿಸಿ ಅನುಭವ ಪಡೆದರು. ಬ್ರಿಟಿಷ್ ಕಾಲದ ಭಾರತೀಯ ದಂಡ ಸಂಹಿತೆ, ಅಪರಾಧ ದಂಡ ಪ್ರಕ್ರಿಯಾ ಸಂಹಿತೆ ಹಾಗೂ ಭಾರತೀಯ ಸಾಕ್ಷ್ಯ ಕಾಯ್ದೆ ಬದಲಾಗಿ ಈ 3 ಕಾನೂನು ಜಾರಿಯಾಗಿವೆ. ಚಂಡೀಗಢ ಪೊಲೀಸರು ಸಾಕ್ಷ್ಯಗಳ ಸಂಗ್ರಹ ಹಾಗೂ ಆರೋಪಿಗಳಿಂದ ಹೇಳಿಕೆ ದಾಖಲು ಸೇರಿ ಇತರೆ ಪ್ರಕ್ರಿಯೆ ತೋರಿಸಿದರು. ಇಡೀ ದೇಶದಲ್ಲೇ 3 ಕಾನೂನು ಚಂಡೀಗಢದಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಂಡಿವೆ. ಮುಂದಿನ 3 ವರ್ಷಗಳಲ್ಲಿ ದೇಶದೆಲ್ಲೆಡೆ ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದೆ.

ಪ್ರಮುಖ ಘಟ್ಟದಲ್ಲಿದೆ ಎಂದು ತಿಳಿಸಿದರು.

ಭಾರತೀಯ ಸಂವಿಧಾನ ಅಳವಡಿಸಿಕೊಂಡ 75 ವರ್ಷಗಳಲ್ಲಿ ನಮ್ಮ ಸಂವಿಧಾನವು ದೇಶದ ನಾಗರಿಕರಿಗೆ ಕಲ್ಪಿಸಿದ ಆದರ್ಶಗಳನ್ನು ಈಡೇರಿಸುವ ನಿಟ್ಟಿನಲ್ಲಿ ಕಾನೂನು ಜಾರಿ ಸಂಕೀರ್ಣ ಪ್ರಯತ್ನವಾಗಿದೆ.

» 04

ರಾಜೀವ್ ತಾಂತ್ರಿಕ ಮಹಾವಿವಿಗೆ ನ್ಯಾಕ್ ಎ ಮಾನ್ಯತೆ

ಹಾಸನ: ನಗರದ ಪ್ರತಿಷ್ಠಿತ ರಾಜೀವ್ ತಾಂತ್ರಿಕ ಮಹಾವಿದ್ಯಾಲಯಕ್ಕೆ ರಾಷ್ಟ್ರೀಯ ಮೌಲ್ಯಮಾಪನ ಮಾನ್ಯತಾ ಮಂಡಳಿ(ನ್ಯಾಕ್)ಯ ಮೊದಲ ಭೇಟಿಯಲ್ಲೇ ಎ ಗ್ರೇಡ್ ಮಾನ್ಯತೆ ದೊರಕಿದೆ ಎಂದು ರಾಜೀವ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷೆ ಡಾ.ರಚನಾ ರಾಜೀವ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಪತ್ರಿಕಾ ಸಂವಾದದಲ್ಲಿ ಈ ವಿಷಯ ಹಂಚಿಕೊಂಡ ಅವರು, ಕಳೆದ ನ.14 ಮತ್ತು 15 ರಂದು ನ್ಯಾಕ್ ತಂಡ ನಮ್ಮ ಕಾಲೇಜಿಗೆ ಭೇಟಿ ನೀಡಿತ್ತು.



ತಂಡವು ಕಾಲೇಜಿನಲ್ಲಿ ಲಭ್ಯವಿರುವ ಎಲ್ಲ ಸವಲತ್ತುಗಳನ್ನು ಕೂಲಂಕಷ ಪರಿಶೀಲನೆ ನಡೆಸಿತು.

ಮುಖ್ಯವಾಗಿ ಪಠ್ಯಕ್ರಮದ ಅಂಶಗಳು, ಬೋಧನೆ-ಕಲಿಕೆ ಮತ್ತು ಮೌಲ್ಯಮಾಪನ, ಸಂಶೋಧನೆ, ನಾವೀನ್ಯತೆ ಮತ್ತು ವಿಸ್ತರಣೆಗಳು, ಮೂಲಸೌಕರ್ಯ ಮತ್ತು ಕಲಿಕೆ ಸಂಪನ್ಮೂಲಗಳು, ವಿದ್ಯಾರ್ಥಿ ಬೆಂಬಲ ಮತ್ತು ಪ್ರಗತಿ, ಆಡಳಿತ, ನಾಯಕತ್ವ ಮತ್ತು ನಿರ್ವಹಣೆ ಹಾಗೂ ಸಾಂಸ್ಥಿಕ ಮೌಲ್ಯಗಳನ್ನು ಪರಿಶೀಲಿಸಿ, ಎಲ್ಲವೂ ಸಮರ್ಪಕವಾಗಿದ್ದ ಕಾರಣದಿಂದ ಎ ಗ್ರೇಡ್ ಮಾನ್ಯತೆ ನೀಡಿದೆ ಎಂದು ಹೇಳಿದರು.

ಇದಕ್ಕೂ ಮುನ್ನ 2023 ಮಾರ್ಚ್‌ನಲ್ಲಿ ರಾಜೀವ್ ತಾಂತ್ರಿಕ ಮಹಾ ವಿದ್ಯಾಲಯಕ್ಕೆ ಗೋಲ್ ರೇಟಿಂಗ್ ಮಾನ್ಯತೆ ಸಹ ಸಿಕ್ಕಿದೆ ಎಂದ ಅವರು, ಇದಕ್ಕಾಗಿ ಶ್ರಮಿಸಿದ ಪ್ರತಿಯೊಬ್ಬರಿಗೂ ಧನ್ಯವಾದ ಹೇಳಿದರು.

ಸಂಸ್ಥೆಯ ಸ್ಥಾಪಕ ಅಧ್ಯಕ್ಷರಾದ ದಿ.ಡಾ.ರಾಜೀವ್ ಅವರು ಹೆಸರಾಂತ ಮಕ್ಕಳ ತಜ್ಞ ವೈದ್ಯರಾಗಿ ಉತ್ತಮ ಕರ್ತವ್ಯ ನಿರ್ವಹಣೆ ಮಾಡುವುದರ ಜೊತೆಗೆ, ಹಾಸನದ ಅಭಿವೃದ್ಧಿ, ಶೈಕ್ಷಣಿಕ ಕ್ಷೇತ್ರದ ಬಗ್ಗೆ ತಮ್ಮದೇ ಆದ ಮುನ್ನೋಟ, ಪರಿಕಲ್ಪನೆ ಹೊಂದಿದ್ದರು. ಅದರ ಪರಿಣಾಮ 1998 ರಲ್ಲಿ ರಾಜೀವ್ ಎಜುಕೇಷನ್ ಟ್ರಸ್ಟ್ ಸ್ಥಾಪಿಸಿದರು.

» 04

> ತಂದೆ ಅವರು ಕಟ್ಟಿ ಬೆಳೆಸಿದ ಸಂಸ್ಥೆಯನ್ನು ಅವರು ನಂಬಿದ್ದ ಮಾರ್ಗದಲ್ಲೇ ಮತ್ತಷ್ಟು ಎತ್ತರ ಹಾಗೂ ವಿಸ್ತಾರವಾಗಿ ಬೆಳೆಸುವುದು ನಮ್ಮ ಹೆಗ್ಗುರಿ. ಈ ಮೂಲಕ ವಿದ್ಯಾರ್ಥಿಗಳಿಗೆ ಇನ್ನೂ ಅತ್ಯುತ್ತಮ ಗುಣಮಟ್ಟದ ಶಿಕ್ಷಣ ನೀಡುವುದು ನಮ್ಮ ಸಂಕಲ್ಪ. ಮುಂದಿನ ದಿನಗಳಲ್ಲಿ ಮೆಡಿಕಲ್ ಕಾಲೇಜು ಸ್ಥಾಪಿಸುವ ಉದ್ದೇಶವಿದೆ. ರಾಜೀವ್ ಶಿಕ್ಷಣ ಸಂಸ್ಥೆಯನ್ನು ಸ್ವಾಯತ್ತ ಸಂಸ್ಥೆಯಾಗಿ ಮಾಡುವ ನಿಟ್ಟಿನಲ್ಲಿ ಹೆಜ್ಜೆ ಇಟ್ಟಿದ್ದೇವೆ.
>
> -ಡಾ.ರಚನಾ ರಾಜೀವ್,
> ಟ್ರಸ್ಟಿನ ಅಧ್ಯಕ್ಷರು.

ಶ್ರೀಕ್ಷೇತ್ರ ಶ್ರವಣಬೆಳಗೊಳ ದಿಗಂಬರ ಜೈನ ಮಹಾಸಂಸ್ಥಾನ



ಪ.ಪೂ. ಶ್ರೀ ನೇಮಿಸಾಗರ ವರ್ಣೀ ಸ್ವಾಮಿಗಳವರು







ಶ್ರವಣಬೆಳಗೊಳದ ದಕ್ಷಿಣಾಚಾರ್ಯ ಪೀಠದ ಪೀಠಾಧೀಶರಾಗಿದ್ದ ಜೈತನ್ಯ ಚೂಡಾಮಣಿ, ಭಟ್ಟಾರಕ ಸ್ವಾದ್ವಾದ ಕೇಸರಿ, ಸ್ವಾಧ್ಯಾಯ ಸಿದ್ಧಾಂತ ಚಕ್ರವರ್ತಿ, ಭಟ್ಟಾರಕ ಚಿಂತಾಮಣಿ, ಪರಮ ಜಿನಧರ್ಮ ಧ್ಯಾನ ಚಿಂತಾಮಣಿ, ವಿಶ್ವವಿದ್ಯಾಶುರುಷ, ಸರ್ವವಿದ್ಯಜ್ಞನಪ್ರಭೆಯ, ಕಲ್ಯಾಣಭಾರತಿ, ಆಧ್ಯಾತ್ಮ ಜ್ಞಾನ ಧವಲತ್ರಯ ಮಹಾಗ್ರಂಥ ಕನ್ನಡ ಅನುವಾದ ಪ್ರವರ್ತಕ, ಪ್ರಾಕೃತ ಭಾಷಾ ಸಂರಕ್ಷಕ-ಪ್ರಸಾರಕ, ಸರ್ವಧರ್ಮ ಬೆಳಗೊಳದ ಬೆಳಕು, ಧರ್ಮತೀರ್ಥ ಸಂರಕ್ಷಕ, ಭಗವಾನ್ ಶ್ರೀ ಮಹಾವೀರ ಶಾಂತಿ ಪ್ರಶಸ್ತಿ ಪುರ

ಪ್ರಾತಃಸ್ಮರಣೀಯ ಪರಮಪೂಜ್ಯ ಜಗದ್ಗುರು ಕರ್ಮಯೋಗಿ
ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ
ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರ

ನಿಷಿಧಿ ಮಂಟಪ ಲೋಕಾರ್ಪಣೆ ಸಮಾರಂಭ

ದಿನಾಂಕ : 06-12-2024, ಶುಕ್ರವಾರ

ಸ್ಥಳ : ಶ್ರವಣಬೆಳಗೊಳ ಗುರುಪೀಠದ ಸಮಾಧಿಸ್ಥ ಶ್ರೀಗಳ ನಿಷಿಧಿ ಬೆಟ್ಟ, ಚಂದ್ರಗಿರಿ



ಸರ್ವರಿಗೂ ಹಾರ್ದಿಕ ಸುಸ್ವಾಗತ

ಡಿಸೆಂಬರ್ 03,ಮಂಗಳವಾರ

ಕಾಫಿ ಧಾರಣೆ (ಪ್ರತಿ 50 ಕೆಜಿ ಗರಿಷ್ಠ ದರ)

ಕಾ ಪಾರ್ಚ್‌ಮೆಂಟ್	₹19600
ಕಾ ಚೆರಿ	₹11200
ಾಸ್ಪ	₹17500
ಾಸ್ಪ ಚೆರಿ	₹10140
	₹14100

ಮಾವೇಶಕ್ಕೆ 1,500 ಬಸ್

ಮೊದಲ ಪುಟದಿಂದ

ರ್‌ಟಿಸಿ ನಿಯಮದ ಅನ್ವಯ ಒಂದು ದಿನಕ್ಕೆ 250 ನಂತೆ 16,500 ರೂ.ಆಗುತ್ತದೆ. 250 ಕಿ.ಮೀ. ರೆ ಹೆಚ್ಚಿನ ಹಣ ನೀಡಬೇಕಾಗುತ್ತದೆ ಎನ್ನುತ್ತಾರೆ ಅಧಿ ಜಿಲ್ಲಾಕೇಂದ್ರದಿಂದ 6 ತಾಲೂಕುಗಳು 40ರಿಂದ 50 ್ಯಾಪ್ತಿಯ ಒಳಗೆ ಇವೆ. ಆಲೂರು ಕೇವಲ 15 ಕಿಮೀ ನಲ್ಲಿದೆ. ಹೋಬಳಿಯಿಂದ ಲೆಕ್ಕ ಹಾಕಿದರೂ 100 ಕಿಮೀ ಇದೆ. ಹೀಗಾಗಿ ಜನರನ್ನು ಕರೆ ತಂದು ಮತ್ತೆ ವಾಪಸ್ ಯ್ದರೂ 200 ಕಿಮೀ. ಆಗುತ್ತದೆ. ಕನಿಷ್ಠ 250 ಕಿ.ಮೀ.ಗೆ ರ್‌ಟಿಸಿ ಲೆಕ್ಕ ಹಾಕಿರುವುದರಿಂದ ಯಾವ ರೀತಿ ೀಕು ಎಂಬ ಚಿಂತನೆಯಲ್ಲಿಮುಖಂಡರು ತೊಡಗಿದ್ದಾರೆ.

ಾವತಿಯಾಗಿಲ್ಲ: ಜಿಲ್ಲೆಗೆ ಕನಿಷ್ಠ 800 ಬಸ್ ಬೇಕು ತಿಳಿಸಿರುವ ಕಾಂಗ್ರೆಸ್ ಮುಖಂಡರು, ಇನ್ನೂ ಡಿಸಿ ಹಣ ಪಾವತಿಸಿಲ್ಲ. ಡಿ.4ರ ಒಳಗೆ ಹಣ ಪಾವತಿಸಿ ಡಿಸಬೇಕಿದ್ದು, ಬೆಂಗಳೂರು ಹಂತದಲ್ಲೇ ವ್ಯವಸ್ಥೆ ಗುತ್ತಿದೆ ಎನ್ನಲಾಗಿದೆ. ಹಾಸನ ಜಿಲ್ಲೆ ಮಾತ್ರವಲ್ಲದೆ ು, ಮಂಡ್ಯ, ಚಾಮರಾಜನಗರ, ಕೊಡಗು, ಚಿಕ್ಕಮಗ ಜಿಲ್ಲೆಯಿಂದಲೂ ಬಸ್‌ಗಳಲ್ಲಿ ಜನರನ್ನು ಕರೆ ತರಲು ಡರಿಗೆ ಜವಾಬ್ದಾರಿ ವಹಿಸಲಾಗಿದೆ.



ಬೇಲೂರು ತಾಲೂಕಿನ ಹಳೇಬೀಡು ಸಮೀಪ ಜೈನರಗುತ್ತಿಯಲ್ಲಿ ನಡೆಯುತ್ತಿರುವ 5ನೇ ದಿನದ ಪಂಚಕಲ್ಯಾಣ ಮಹೋತ್ಸವದಲ್ಲಿ ಸಮವಸರಣದಲ್ಲಿ ಜೈನಮುನಿಗಳನ್ನು ಆರೋಹಣ ಮಾಡಲಾಯಿತು.

ಸಮವಸರಣ ನಿರ್ಮಿಸುತ್ತಾರೆ ಎಂಬುದು ಜಿನ ಧರ್ಮ ಗ್ರಂಥಗಳಲ್ಲಿ ಉಲ್ಲೇಖವಿದೆ ಎಂದು ಪುರೋಹಿತರಾದ ಪ್ರವೀಣ್ ಪಂಡಿತ್ ಹಾಗೂ ಪವನ್ ಪಂಡಿತ್ ಹೇಳಿದರು.

ಜೈನರಗುತ್ತಿಯಲ್ಲಿ ನಡೆಯುತ್ತಿರುವ ಪಂಚಕಲ್ಯಾಣದಲ್ಲಿ ಬುಧವಾರ(ಡಿ.4ರಂದು) ತೀರ್ಥಂಕರರ ಮೋಕ್ಷ ಕಲ್ಯಾಣ ನಡೆಯುತ್ತದೆ. ಪ್ರತಿಷ್ಠಾಪನೆಯಾಗಿರುವ 31 ಅಡಿ ಎತ್ತರದ ಮುನಿಸುವ್ರತ ತೀರ್ಥಂಕರ ಹಾಗೂ ಪದ್ಮಾಸನ ಭಂಗಿಯ ಕುಳಿತಿರುವ ಶೀತಲನಾಥ ತಿರ್ಥಂಕರ ಮೂರ್ತಿಗಳಿಗೆ ಪ್ರಥಮ ಮಸ್ತಕಾಭಿಷೇಕ ನಡೆಯಲಿದೆ. ಎರಡೂ ಮೂರ್ತಿಗಳಿಗೆ 1008 ಕಳಸ, ನಾಲ್ಕು ಚತುಷ್ಕೋನ, ಒಂದು ಪ್ರಥಮ ಕಳಸ ಹಾಗೂ ನಾನಾ ದ್ರವ್ಯಗಳಿಂದ ಮಸ್ತಕಾಭಿಷೇಕ ನಡೆಯಲಿದೆ ಎಂದು ಪಂಚಕಲ್ಯಾಣ ಸಮಿತಿ ಅಧ್ಯಕ್ಷ ಬ್ರಹ್ಮದೇವಯ್ಯ ಹಾಗೂ ಪ್ರಧಾನ ಕಾರ್ಯದರ್ಶಿ ನೇಮಿರಾಜ ಅರಿಗ ತಿಳಿಸಿದ್ದಾರೆ.

ಅಭಿವೃದ್ಧಿ: ಜೈನರಗುತ್ತಿ ಕ್ಷೇತ್ರವನ್ನು ಅಭಿವೃದ್ಧಿಪಡಿಸಿದ ಕೀರ್ತಿ ಚಂದ್ರಪ್ರಭ ಮುನಿ ಮಹಾರಾಜರಿಗೆ ಸಲ್ಲುತ್ತದೆ ಎಂದು ವೀರ ಸಾಗರ ಮುನಿ ಮಹಾರಾಜರು ಹೇಳಿದರು. ತಾಲೂಕಿನ ಹಳೇಬೀಡು ಸಮೀಪ ಜೈನರಗುತ್ತಿಯಲ್ಲಿ ಹೀಗಾಗಿ ಜೈನರಗುತ್ತಿ ಪ್ರಗತಿಗೆ ಚಂದ್ರಪ್ರಭ ಮಹಾರಾಜರೇ ಕಾರಣೀಕರ್ತರಾಗುತ್ತಾರೆ'' ಎಂದು ವೀರಸಾಗರ ಮುನಿ ಮಹಾರಾಜರು ಹೇಳಿದರು.

ಪಂಚಕಲ್ಯಾಣ ಸಮಿತಿ ಕೋಶಾಧಿಕಾರಿ ಜಯೇಂದ್ರ ಕುಮಾರ್, ಉಪಾಧ್ಯಕ್ಷರಾದ ಹೊಸದುರ್ಗದ ಎಚ್.ಪಿ.ಬ್ರಹ್ಮಪಾಲ್, ಧನಪಾಲ್, ಕಾರ್ಯದರ್ಶಿಗಳಾದ ಎಂ. ಆರ್.ನಾಗೇಂದ್ರ ಪ್ರಸಾದ್, ಬ್ರಹ್ಮೇಶ್ ಜೈನ್, ಪ್ರಮುಖರಾದ ದೇವೇಂದ್ರ ಹೊಂಗೇರಿ, ಶಾಂತರಾಜು ದೇವೇಂದ್ರಪ್ಪ ಹದಳಗಿ, ಧವನ್ ಜೈನ್, ಕೀರ್ತಿಕುಮಾರ್, ಸುಶ್ಮಾ ಅರುಣ್ ಪಾಲ್ಗೊಂಡಿದ್ದರು.



ಅಷ್ಟೋತ್ತರ, ಸೂರ್ಯ ನಮಸ್ಕಾರ, ತ್ರಿಮತಸ್ಥ ಬ್ರಾಹ್ಮಣ ಪಟುಗಳಿಗೆ ಬ್ರಹ್ಮೋಪದೇಶ ಮತ್ತು ಶ್ರೀಯೋಗೇಶ್ವರ ಯಜ್ಞವಲ್ಕ್ಯ ಮರ್ಹಗಳ ಜಯಂತಿ ಕಾರ್ಯಕ್ರಮ ನೆರವೇರಲಿದೆ.

ಮುಖ್ಯ ಅತಿಥಿಗಳಾಗಿ ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ನಿಕಟಪೂರ್ವ ನಿರ್ದೇಶಕ ವತ್ಸಲಾ ನಾಗೇಶ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷ ವೈ.ಎ.ಸುಧಾಕರ್ ಬಾಬು, ತಾಲೂಕು ಬ್ರಾಹ್ಮಣ ಸಂಘದ ಗೌರವ ಅಧ್ಯಕ್ಷ ಕೆ. ರಮೇಶ್, ಸಂಘದ ಅಧ್ಯಕ್ಷ ಎಸ್.ರವಿಕುಮಾರ್, ಕಾರ್ಯದರ್ಶಿ ಆಡಿಟರ್ ಸುಬ್ರಹ್ಮಣ್ಯ ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಕಾಂಗ್ರೆಸ್ ಜನಕಲ್ಯಾಣ ಸಮಾವೇಶ ಹಾಸ್ಯಾಸ್ಪದ

■ ವಿಕ ಸುದ್ದಿಲೋಕ ಹಾಸನ



ಶಾಸಕ ಸ್ವರೂಪ್ ಪ್ರಕಾಶ್ ಟೀಕೆ

ಸರಕಾರ ದಿವಾಳಿಯಾಗಿದ್ದರೂ, ನಗರದಲ್ಲಿ ಜನಕಲ್ಯಾಣ ಸಮಾವೇಶ ಮಾಡುತ್ತಿರುವುದು ಖಂಡನೀಯ ಹಾಗೂ ಹಾಸ್ಯಾಸ್ಪದ ಎಂದು ಶಾಸಕ ಸ್ವರೂಪ್ ಪ್ರಕಾಶ್ ಟೀಕಿಸಿದರು.

ಕಾಂಗ್ರೆಸ್ ಸರಕಾರ ಜಿಲ್ಲೆಯ ಅಭಿವೃದ್ಧಿಗೆ ನಯಾಪೈಸೆ ನೀಡದೆ ಕಾಮಗಾರಿ ಕುಂಠಿತವಾಗಿದೆ. ತಾಲೂಕು ಒಂದರಲ್ಲೇ ಮಳೆಯಿಂದ ನೂರಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದ್ದು ನಯಾಪೈಸೆ ಪರಿಹಾರ ನೀಡಿಲ್ಲ, ರಸ್ತೆಗಳು ಹಾನಿಯಾಗಿದ್ದು ದುರಸ್ತಿಗೆ ಕ್ರಮ ಕೈಗೊಂಡಿಲ್ಲ, ಸರಕಾರದ ಸಾಧನೆ ಶೂನ್ಯ,'' ಎಂದು ಸುದ್ದಿಗೋಷ್ಠಿಯಲ್ಲಿ ಕಿಡಿಕಾರಿದರು.

''ನಗರದಲ್ಲಿ ಸಮಾವೇಶ ಮಾಡುತ್ತಿರುವ ಸರಕಾರದ ಸಾಧನೆ ಏನು ಎಂಬುದನ್ನು ತಿಳಿಸಲಿ. ಸರಕಾರಿ ಶಾಲಾ-ಕಾಲೇಜುಗಳಿಗೆ ಅನುದಾನ ನೀಡಿಲ್ಲ, ಮೂರು ಕ್ಷೇತ್ರದಲ್ಲಿ ಜಯಗಳಿಸಿದ್ದೇ ಸಾಧನೆಯಲ್ಲ, ಆಡಳಿತ ಪಕ್ಷದ ಪರ ಜನ ತೀರ್ಪು ನೀಡುವುದು ಸಹಜ ಅಂದಮಾತ್ರಕ್ಕೆ ದೊಡ್ಡ ಸಾಧನೆ ಎನ್ನಬೇಕೆ,'' ಎಂದು ಪ್ರಶ್ನಿಸಿದರು.

''ನಗರದಲ್ಲಿ ನನೆಗುದಿಗೆ ಬಿದ್ದಿರುವ ರೈಲ್ವೆಮೇಲ್ಸೇತುವೆಗೆ ಸರಕಾರ ತನ್ನ ಪಾಲಿನ ಹಣ ನೀಡಲಿಲ್ಲ, ಹೀಗಾಗಿ ನಾವೇ ಕೇಂದ್ರ ಸಚಿವ ವಿ.ಸೋಮಣ್ಣ ಅವರನ್ನು ಕರೆಸಿ ರೈಲ್ವೆಇಲಾಖೆಯಿಂದಲೇ ಕಾಮಗಾರಿ ಪೂರ್ಣಗೊಳಿಸುವಂತೆ ಮನವಿ ಮಾಡಿದ್ದೇವೆ,'' ಎಂದರು.

ಗೋಷ್ಠಿಯಲ್ಲಿ ನಗರಸಭೆ ಅಧ್ಯಕ್ಷ ಚಂದ್ರೇಗೌಡ, ಜೆಡಿಎಸ್ ತಾಲೂಕು ಅಧ್ಯಕ್ಷ ಎಸ್.ದ್ಯಾವೇಗೌಡ, ನಗರಸಭೆ ಮಾಜಿ ಸದಸ್ಯ ಶ್ರೇಯಸ್, ಹೊಂಗೆರೆ ರಘು ಹಾಜರಿದ್ದರು.

ರಾಜೀವ್ ತಾಂತ್ರಿಕ ಮಹಾವಿದ್ಯಾಲಯಕ್ಕೆ ನ್ಯಾಕ್ ಎ ಮಾನ್ಯತೆ

■ ವಿಕ ಸುದ್ದಿಲೋಕ ಹಾಸನ

ಶಿಕ್ಷಣ ಸಂಸ್ಥೆ ಅಧ್ಯಕ್ಷೆ ಡಾ.ರಚನಾ ರಾಜೀವ್ ಮಾಹಿತಿ



ನಗರದ ರಾಜೀವ್ ತಾಂತ್ರಿಕ ಮಹಾವಿದ್ಯಾಲಯಕ್ಕೆ ರಾಷ್ಟ್ರೀಯ ಮೌಲ್ಯಮಾಪನ ಮಾನ್ಯತಾ ಮಂಡಳಿಯಿಂದ 'ಎ' ಗ್ರೇಡ್ ಮಾನ್ಯತೆ ಬಂದಿದೆ ಎಂದು ರಾಜೀವ್ ಶಿಕ್ಷಣ ಸಂಸ್ಥೆ ಅಧ್ಯಕ್ಷೆ ಡಾ.ರಚನಾ ರಾಜೀವ್ ತಿಳಿಸಿದರು.

''ನ.14 ಮತ್ತು 15ರಂದು ನ್ಯಾಕ್ ತಂಡ ಕಾಲೇಜಿಗೆ ಭೇಟಿ ನೀಡಿತ್ತು. ಈ ತಂಡ ಕಾಲೇಜಿನಲ್ಲಿ ಲಭ್ಯವಿರುವ ಸವಲತ್ತು ಗಳನ್ನು ಪರಿಶೀಲನೆ ನಡೆಸಿ ಗ್ರೇಡ್ ನೀಡಿದೆ,'' ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

''ತಾಂತ್ರಿಕ ವಿದ್ಯಾಲಯದಲ್ಲಿ ಪ್ರಾರಂಭದಿಂದ ಈವರೆಗೂ 20 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡಿ ಪದವಿ ಪಡೆದುಕೊಳ್ಳುವ ಜತೆಗೆ ಕ್ಯಾಂಪಸ್ ಸೆಲೆಕ್ಷನ್‌ನಲ್ಲಿ ಶೇ.70ರಷ್ಟು ವಿದ್ಯಾರ್ಥಿಗಳು ಉದ್ಯೋಗ ಪಡೆದಿರುವುದು ಸಂತಸದ ಸಂಗತಿ,'' ಎಂದು ಹರ್ಷ ವ್ಯಕ್ತಪಡಿಸಿದರು.

''ಕಾಲೇಜಿನ ಪಠ್ಯಕ್ರಮದ ಅಂಶಗಳು, ಬೋಧನೆ, ಕಲಿಕೆ ಮತ್ತು ಮೌಲ್ಯಮಾಪನ, ಸಂಶೋಧನೆ, ನಾವೀನ್ಯತೆ ಮತ್ತು ವಿಸ್ತರಣೆಗಳು, ಮೂಲಸೌಕರ್ಯ ಮತ್ತು ಕಲಿಕೆ ಸಂಪನ್ಮೂಲಗಳು, ವಿದ್ಯಾರ್ಥಿಗಳ ಬೆಂಬಲ ಮತ್ತು ಪ್ರಗತಿ, ಆಡಳಿತ, ನಾಯಕತ್ವ ಮತ್ತು ನಿರ್ವಹಣೆ, ಸಾಂಸ್ಥಿಕ ಮೌಲ್ಯಗಳು ಮತ್ತು ಉತ್ತಮ ಅಭ್ಯಾಸಗಳನ್ನು ಪರಿಶೀಲಿಸಿ ಅದರ ಆಧಾರದ ಮೇಲೆ ರಾಜೀವ್ ತಾಂತ್ರಿಕ ಮಹಾವಿದ್ಯಾಲಯಕ್ಕೆ ''ಎ'' ಗ್ರೇಡ್ ಮಾನ್ಯತೆ ನೀಡಿರುವುದು ಸಂಸ್ಥೆಗೆ ಹೆಮ್ಮೆಯ ವಿಚಾರವಾಗಿದೆ. ಇದಕ್ಕೆ ಕಾರಣರಾದ ಎಲ್ಲಾ ವಿಭಾಗದ ಮುಖ್ಯಸ್ಥರು. ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗದವರಿಗೆ ಅಭಿನಂದನೆ ಸಲ್ಲಿಸುತ್ತೇನೆ'' ಎಂದು ಹೇಳಿದರು.

ವೈದ್ಯಕೀಯ ಕಾಲೇಜು: ''ರಾಜೀವ್ ಗ್ರೂಪ್ ಆಫ್ ಇನ್ಸ್‌ಟಿಟ್ಯೂಷನ್ ವತಿಯಿಂದ ನಗರದಲ್ಲಿ ವೈದ್ಯಕೀಯ ಕಾಲೇಜು ಪ್ರಾರಂಭಿಸುವ ಕನಸು ಹೊತ್ತು ಕಾರ್ಯಪ್ರವೃತ್ತರಾಗಿದ್ದೇವೆ,''ಎಂದರು.

ಗೋಷ್ಠಿಯಲ್ಲಿ ರಾಜೀವ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ. ಬಿ.ಎನ್. ರತ್ನ, ಉಪಾಧ್ಯಕ್ಷ ಡಾ.ರಂಜಿತ್ ರಾಜೀವ್, ಕಾಲೇಜಿನ ಪ್ರಾಂಶುಪಾಲ ಡಾ. ಮಹೇಶ್ ಪಿ.ಕೆ., ರಾಮಕುಮಾರ್ ಹಾಜರಿದ್ದರು.

ದು ಸರಕಾರಿ ನೌಕರರ ಸಂಘದ ಚುನಾವಣೆ

ುದ್ದಿಲೋಕ ಹಾಸನ

ರಕಾರಿ ನೌಕರರ ಸಂಘದ ಅಧ್ಯಕ್ಷ ಡಿ.4ರಂದು ನಡೆಯಲಿರುವ ಣೆ ಕ್ಲೈಮ್ಯಾಕ್ಸ್‌ಹಂತ ತಲುಪಿದೆ. ಯ ಏಳು ತಾಲೂಕಿನ ಏಳು ಗಳು ಸೇರಿದಂತೆ ಹಾಸನತಾಲೂಕಿನ ಲಾಖೆಯಿಂದ 66 ಹಾಗೂ ತಿ ಜಲಾಶಯ ವಿಭಾಗದಿಂದ ನಿರ್ದೇಶಕರು ಸೇರಿ ಒಟ್ಟು 74 ಕರು ಆಯ್ಕೆಯಾಗಿದ್ದು, ಇವರು ಾಧ್ಯಕ್ಷರನ್ನು ಗೆಲ್ಲಿಸಬೇಕಿದೆ.

ುತಗಟ್ಟೆಗೆ : ಅಧ್ಯಕ್ಷ ಸ್ಥಾನಕ್ಕೆ ನೌಕರರ ರಾಜ್ಯಸಂಘದ ಮಾಜಿ ಂಗೌಡ ಮುಖಂಡ ಭಾಗವು

ಮಂಜೇಗೌಡರ ಸಹೋದರ ಹಾಗೂ ಆರ್‌ಟಿಒ ಇಲಾಖೆ ಇನ್ಸ್‌ಪೆಕ್ಟರ್ ಬಿ.ಪಿ.ಕೃಷ್ಣೇಗೌಡ ತೀವ್ರಸ್ಪರ್ಧೆ ಒಡ್ಡಿ ಒಂದಿಷ್ಟು ಮತದಾರರನ್ನು ಈಗಾಗಲೇ ಪ್ರವಾಸಕ್ಕೆ ಕರೆದೊಯ್ದಿದ್ದು ಪ್ರವಾಸಮುಗಿಸಿ ಅವರೆಲ್ಲರೂ ಡಿ.4 ರಂದು ನೇರವಾಗಿ ಮತಗಟ್ಟೆಗೆ ಬಂದು ಮತ ಚಲಾಯಿಸಲಿದ್ದಾರೆ ಎಂದು ಮೂಲ ತಿಳಿಸಿದೆ. ತಮ್ಮ ಸಹೋದನನ್ನು ಗೆಲ್ಲಿಸಿಕೊಳ್ಳಲೇಬೇಕೆಂದು ಬಾಗೂರು ಮಂಜೇಗೌಡ ಎಲ್ಲ ಬಗೆಯ ತಂತ್ರಗಾರಿಕೆ ರೂಪಿಸಿರುವುದು ಗುಟ್ಟಾಗಿ ಉಳಿದಿಲ್ಲ.

ಸರಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಶ್ರೀನಿವಾಸ್ ಪ್ರತಿರ್ದಿಯಾಗಿರುವ ಶ್ರೀನಿವಾಸ್ ಮತ್ತು ಶಿವಸ್ವಾಮಿ ನಡುವೆ ಅಧಿಕಾರ ಹಂಚಿಕೆಯ ಒಪ್ಪಂದ ಮಾಡಿಕೊಂಡು ಕಣಕ್ಕೆ ಇಳಿದಿದ್ದಾರೆ. ಒಟ್ಟಾರೆ ಕೃಷ್ಣೇಗೌಡರಿಗೆ ಕಾಂಗ್ರೆಸ್ ಶಾಸಕರು,ಸಂಸದ ಶ್ರೇಯಸ್ ಎಂ.ಪಟೇಲ್ ಬೆಂಬಲವಾಗಿ ನಿಂತಿರುವ ಜತೆಗೆ ಜೆಡಿಎಸ್ ಶಾಸಕರು ಬೆಂಬಲ ನೀಡುತ್ತಿರುವುದು ಅಚ್ಚರಿಯ ಸಂಗತಿ. ಮಾಜಿ ಶಾಸಕ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಂ ಜೆ.ಗೌಡ ಚುನಾವಣೆ ಬಗ್ಗೆ ಆಸಕ್ತಿ ವಹಿಸಿ ಶ್ರೀನಿವಾಸ್ ಬೆಂಬಲಕ್ಕೆ ನಿಂತಿದ್ದಾರೆ ಎನ್ನಲಾಗಿದೆ. ಈ ಎಲ್ಲ ಕಾರಣದಿಂದ ಡಿ.4ರ ಚುನಾವಣೆ ತೀವ್ರ ಕುತೂಹಲ ಕೆಗಲಿಸಿದೆ.

ಬಾವಿಗೆ ಬಿದ್ದು ನೌಕರ ಸಾವು

■ ವಿಕ ಸುದ್ದಿಲೋಕ ವನಗೂರು



ಶಿಕ್ಷಣ ಇಲಾಖೆ ನೌಕರ ಮನೆಯ ಪಕ್ಕದ ಬಾವಿಗೆ ಬಿದ್ದು ಮೃತಪಟ್ಟಿರುವ ಘಟನೆ ಹೆತ್ತೂರು ಗ್ರಾಮದಲ್ಲಿ ನಡೆದಿದೆ.

ಹಾನುಬಾಳು ಹೋಬಳಿಯ ಕುಂಬರಡಿ ಗ್ರಾಮದ ಸರಕಾರಿ ಶಾಲೆಯಲ್ಲಿ ದ್ವಿತೀಯ ದರ್ಜೆ ನೌಕರನಾಗಿ ಕೆಲಸ ಮಾಡುತ್ತಿದ್ದ ಎಚ್.ಡಿ ಚಂದ್ರಶೇಖರ್ (43)ಮೃತರು. ಹೆತ್ತೂರು ಗ್ರಾಮದ ಲೇಟ್ ದೊಟ್ಟಯ್ಯ ಮೇಷ್ಟು ಅವರ ಪುತ್ರ ಚಂದ್ರಶೇಖರ್ ತಮ್ಮ ತಂದೆಯ ಮರಣದ ನಂತರ ಅನುಕಂಪದ ಆಧಾರದ ಮೇಲೆ ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಮನೆಯ ಪಕ್ಕದ ಬಾವಿಗೆ ಹಾರಿದ್ದಾರೆ. ಅವರ ಸಂಬಂಧಿ ಅಂದಾಜು ಅರ್ಧ ಗಂಟೆ ಕಳೆದರೂ ಚಂದ್ರಶೇಖರ್ ಇಲ್ಲದಿರುವುದನ್ನು ಗಮನಿಸಿ ಹುಡುಕಿದಾಗ ತೆರೆದ ಬಾವಿಯೊಳಗೆ ಮೃತದೇಹ ಪತ್ತೆಯಾಗಿದೆ.

ಮಾನಸಿಕ ರೋಗದಿಂದ ಬಳಲುತ್ತಿದ್ದ ಚಂದ್ರಶೇಖರ್ ಮತ್ತು ಪತಿಯೊಂದಿಗೆ ಕೌಟುಂಬಿಕ

ಕಾಂಗ್ರೆಸ್‌ನದು ಸ್ವಾರ್ಥ ತುಂಬಿದ ಸಮಾವೇಶ

ಭಾರತೀಯ ಕಿಸಾನ್ ಸಂಘದ ಕರ್ನಾಟಕ ಪ್ರದೇಶ ಪ್ರಾಂತ್ಯ ಅಧ್ಯಕ್ಷ ಹಾಡ್ಯ ರಮೇಶ್ ಕಿಡಿ

■ ವಿಕ ಸುದ್ದಿಲೋಕ ಹಾಸನ



ಹಾಸನದಲ್ಲಿಕಾಂಗ್ರೆಸ್ ನಡೆಸುತ್ತಿರುವ ಕಾರ್ಯಕ್ರಮ ಜನಕಲ್ಯಾಣ ಸಮಾವೇಶ ಅಲ್ಲ, ಅದು ಸ್ವಾರ್ಥ ತುಂಬಿದ ಅಭಿವೃದ್ಧಿ ಇಲ್ಲದ ಕಾಂಗ್ರೆಸ್ ಸಮಾವೇಶವಾಗಿದೆ ಎಂದು ಭಾರತೀಯ ಕಿಸಾನ್ ಸಂಘ ಕರ್ನಾಟಕ ಪ್ರದೇಶ ಪ್ರಾಂತ್ಯ ಅಧ್ಯಕ್ಷ ಹಾಡ್ಯ ರಮೇಶ್ ಆರೋಪಿಸಿದರು.

''ರಾಜಕೀಯವಾಗಿ ರೈತರನ್ನು ಬಳಸಿಕೊಂಡು ಗೆದ್ದು ಬೀಗುತ್ತಿರುವ ಕಾಂಗ್ರೆಸ್ ಸರಕಾರ, ಅನ್ನದಾತರಿಗೆ ಸಿಗಬೇಕಾದ ಯೋಜನೆಗಳನ್ನು ನೀಡದೆ ಶೋಷಣೆ ಮಾಡುತ್ತಿದೆ. ರಾಜ್ಯದಲ್ಲಿ ಶೇ.70ಕ್ಕೂ ಹೆಚ್ಚು ರೈತ ಕುಟುಂಬಗಳು ಇದ್ದು ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬರುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಆದರೆ, ಕಾಂಗ್ರೆಸ್ ಸರಕಾರ ಕಬ್ಬು ಹಿಂಡಿ ರಸ ತೆಗೆದ ಮೇಲೆ ಸಿಪ್ಪೆಯನ್ನು ಬಿಸಾಕಿದಂತೆ ರೈತರನ್ನು ರೈತರಿಗೆ ಸಮಸ್ಯೆ ತಂದೊಡ್ಡಿದೆ. ಆರ್‌ಟಿಸಿ, ಎಂಆರ್, ಈ ಸ್ಟ್ಯಾಂಪ್ ಹಾಗೂ ಕಂದಾಯ ಇಲಾಖೆಯ ಎಲ್ಲಾ ಶುಲ್ಕಗಳನ್ನು ದುಬಾರಿ ಮಾಡಿ ಬಡ ರೈತರನ್ನು ಶಿಕ್ಷಿಸುತ್ತಿದೆ,'' ಎಂದು ದೂರಿದರು.

''ಅನ್ನದಾತರಿಗೆ ಸಿಗುತ್ತಿರುವ ಸೌಲಭ್ಯಕ್ಕೆ ಕತ್ತರಿ ಹಾಕುತ್ತಿರುವ ರೈತ ವಿರೋಧಿ ಸರಕಾರ, ಈಗ ಕೃಷಿ ಬೆಲೆ ಆಯೋಗಕ್ಕೆ ಅನುದಾನ ನೀಡದೆ ಹಾಗೂ ಕಾಯಂ ಅಧ್ಯಕ್ಷರ ನೇಮಕ ಮಾಡದೆ ಕಚೇರಿಗೆ ಬೀಗ ಹಾಕುವ ಸನ್ನಿವೇಶ ಎದುರಾಗಿದೆ. ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರು ಈವರೆಗೂ ರೈತರ ಸಭೆ ಕರೆದಿಲ್ಲ, ಕೃಷಿ ಆಯೋಗಕ್ಕೆ ವಾರ್ಷಿಕ ವರದಿ ಸಲ್ಲಿಸಿಲ್ಲ. ಇದರಿಂದ ಭೂತಾಯಿ ಮಕ್ಕಳಿಗೆ ಸಮಸ್ಯೆಯಾಗುತ್ತಿದೆ. ರೈತರ ಮೇಲೆ ದೇಶ ಸಾದಿಸುತಿರುವುದು ಅಕಮ್ಯ ಅಪರಾಧ.'' ಎಂದರು.